O.S.No.:223/2020
P.W.:1

ಈ ದಿನ ದಿಃ24.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಾದ ಶ್ರೀ ಟಿ.ಕೆ.ಆರ್ ರವರಿಂದಃ-**

1. ನಾನು 10ನೇ ತರಗತಿಯ ವರೆಗೆ ವ್ಯಾಸಂಗ ಮಾಡಿರುತ್ತೇನೆ. ನನ್ನ ಮುಖ್ಯವಿಚಾರಣ ಪ್ರಮಾಣ ಪತ್ರದ ಸಂಗತಿಗಳನ್ನು ನನ್ನ ತಾಯಿ ಹೇಳಿ ಬರೆಸಿರುತ್ತಾರೆ. ಈ ದಾವೆಯನ್ನು ಏನು ಪರಿಹಾರ ಕೋರಿ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸೈಟಿಗೆ ಸಂಬಂಧಿಸಿದಂತೆ ಈ ಕೇಸನ್ನು ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ಸರ್ಕಾರಕ್ಕೆ ನಮಗೆ ಸೈಟು ಕೊಡುವಂತೆ ನಾವು ಯಾವುದೇ ಅರ್ಜಿ ಸಲ್ಲಿಸಿರಲಿಲ್ಲ. ನಮಗೆ ಹಕ್ಕು ಪತ್ರ ಕೊಟ್ಟ ಸೈಟ್ ನಂಬರ್ 50 ಆಗಿರುತ್ತದೆ.

2. ಸರ್ಕಾರ ನಮಗೆ ಮಂಜೂರು ಮಾಡಿದೆ ಎಂದು ಹೇಳುವ ಸೈಟು ಗೋಮಾಳದ ಜಮೀನಿನಲ್ಲಿ ಇರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಗೋಮಾಳದ ಜಮೀನಿನಲ್ಲಿ ಸೈಟುಗಳನ್ನು ಮಾಡಿ ಜನರಿಗೆ ಕೊಡಬೇಕು ಎಂಬ ಬಗ್ಗೆ ಇರುವಂತಹ ಸರ್ಕಾರದ ಆದೇಶವನ್ನು ನಾನು ಈ ಕೇಸಿನಲ್ಲಿ ಹಾಜರುಪಡಿಸಿರುತ್ತೇನೆ. ಗೋಮಾಳದ ಜಮೀನಿನಲ್ಲಿ ಸೈಟುಗಳನ್ನು ಕೊಡುವ ಉದ್ದೇಶಕ್ಕಾಗಿ ಆ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡ ಬಗ್ಗೆ ಮತ್ತು

ಅದರಲ್ಲಿ ಸೈಟುಗಳನ್ನು ಜನರಿಗೆ ಹಂಚಿದ ಬಗ್ಗೆ ಎಸಿ ಆಗಲೀ, ಡಿಸಿ ಆಗಲೀ ಯಾವುದೇ ಆದೇಶವನ್ನು ಮಾಡಿರುವುದಿಲ್ಲ ಎಂದರೆ ಸರಿ. ಗೋಮಾಳದ ಜಮೀನಿನಲ್ಲಿ 1ನೇ ಪ್ರತಿವಾದಿಯು ಸುಮಾರು 60ವರ್ಷಗಳಿಂದಲ್ಲೂ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

3. 1998ನೇ ಸಾಲಿನಲ್ಲಿ ತಾವು ಉಳುಮೆ ಮಾಡುತ್ತಿದ್ದ ಜಮೀನನ್ನು ತಮಗೆ ಮಂಜೂರು ಮಾಡಿಕೊಡಬೇಕು ಎಂದು 1ನೇ ಪ್ರತಿವಾದಿಯು ಸರ್ಕಾರಕ್ಕೆ ಅರ್ಜಿಯನ್ನು ಸಹ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. 1972ರಿಂದಲ್ಲೂ 1ನೇ ಪ್ರತಿವಾದಿಯ ತಂದೆಯಾದ ಕೆಂಚಪ್ಪ ರವರು ಗೋಮಾಳದ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದಾರೆ ಎಂಬ ಬಗ್ಗೆ ಕಂದಾಯ ಇಲಾಖೆಯವರು ಅವರ ಹೆಸರಿಗೆ ಒಂದು ಸರ್ವೆ ಸ್ಕೆಚ್ ನ್ನು ಸಹ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಅವರ ತಂದೆಯ ಮರಣದ ನಂತರ 1ನೇ ಪ್ರತಿವಾದಿಯೇ ಆ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

4. ಪಂಚಾಯಿತಿಯವರು ಗೋಮಾಳದ ಜಮೀನಿನಲ್ಲಿ ಹಕ್ಕುಪತ್ರ ಕೊಟ್ಟಿರುವ ಬಗ್ಗೆ ತಮ್ಮ ಕಚೇರಿಯಲ್ಲಿ ಯಾವುದೇ ಆದೇಶ ಅಥವಾ ದಾಖಲೆಗಳು ಲಭ್ಯವಿಲ್ಲವೆಂದು 1ನೇ ಪ್ರತಿವಾದಿಗೆ ಹಿಂಬರಹ ನೀಡಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾವುಗಳು 1ನೇ

ಪ್ರತಿವಾದಿಯು ಇರುವಂತಹ ಜಮೀನಿನ ಸ್ವಾಧೀನಾನುಭವಕ್ಕೆ ತೊಂದರೆ ಕೊಟ್ಟ ಕಾರಣಕ್ಕೆ ಅವರು ನಮ್ಮ ವಿರುದ್ಧ ಪೊಲೀಸ್ ದೂರು ನೀಡಿದ್ದರು ಎಂದರೆ ಸರಿ. ಸದರಿ ದೂರು ಪುಟ್ಟಮಾದಯ್ಯ ಮತ್ತು ಇತರರ ವಿರುದ್ಧ ದಾಖಲಾಗಿತ್ತು ಎಂದರೆ ಸಾಕ್ಷಿಯು ಕೊಟ್ಟಿರಬಹುದು ಎಂದು ನುಡಿಯುತ್ತಾರೆ. ಸ್ಥಳದಲ್ಲಿ ಗಲಾಟೆಯಾದ ನಂತರ ತಹಶೀಲ್ದಾರ್ ರವರು ಸಹ ಸ್ಥಳಕ್ಕೆ ಭೇಟಿ ನೀಡಿದ್ದರು ಎಂದರೆ ಸರಿ. ಸ್ಥಳದಲ್ಲಿ ತಹಶೀಲ್ದಾರ್ ರವರು ಒಂದು ಮಹಜರ್ ನ್ನು ಮಾಡಿ ಆ ಗೋಮಾಳದ ಜಮೀನಿನಲ್ಲಿ ಯಾರಿಗೂ ಹಕ್ಕುಪತ್ರದಡಿಯಲ್ಲಿ ಯಾವುದೇ ಸೈಟುಗಳನ್ನು ಮಂಜೂರು ಮಾಡಿಲ್ಲ ಎಂಬ ಬಗ್ಗೆ ಮಹಜರ್ ನಲ್ಲಿ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

5. ನಮಗೆ ಯಾವುದೇ ಹಕ್ಕುಪತ್ರ ಕೊಡದೆ ಇದ್ದರು ನಾವುಗಳು ಬಿಲ್ ಕಲೆಕ್ಟರ್ ರವರೊಂದಿಗೆ ಶ್ಯಾಮಿಲಾಗಿ ಸುಳ್ಳು ಹಕ್ಕುಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-2ಕ್ಕೆ ತಹಶೀಲ್ದಾರ್ ರವರ ಸಹಿ ಇಲ್ಲ ಎಂದರೆ ಸರಿ. ನಿಪಿ-2ನ್ನು ಕೊಡಲು ಪಂಚಾಯಿತಿ ಅಧಿಕಾರಿಗಳಿಗೆ ಯಾವುದೇ ಹಕ್ಕುಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಿಪಿ-3 ರಿಂದ ನಿಪಿ-5ನ್ನು ಸಹ ನಾವು ಈ ಪ್ರಕರಣಕೋಸ್ಕರವೇ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಸ್ವಾಧೀನದಲ್ಲಿರುವ ಜಮೀನಿಗೆ ತೊಂದರೆ ಕೊಡಬೇಕೆಂಬ ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

O.S.No.:223/2020
P.W.:1

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**